<u>1 ನೇ ಅಪರ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ</u>
<u>ಎಸ್.ಸಿ. ನಂ.  172/2022</u>

<u>ದಿನಾಂಕ ಃ 18.12.2025  ರಂದು ಪ್ರಮಾಣ ವಚನ ಬೋಧಿಸಲಾಗಿದೆ.</u>

ಸಿ. ಡಬ್ಲ್ಯೂ:  18   ಪಿ. ಡಬ್ಲ್ಯೂ:21

| | |
|---|---|
| ಸಾಕ್ಷಿದಾರರ ಹೆಸರು | ಎನ್ ವಿಶ್ವನಾಥ್ |
| ತಂದೆಯ ಹೆಸರು | ಕೆ .ನಾಗೇಶ್ ನಾಯಕ್ |
| ವಯಸ್ಸು | 53 ವರ್ಷ |
| ಉದ್ಯೋಗ | ಹೆಚ್ಚುವರಿ ತಹಶೀಲ್ದಾರ್,<br>ಮೈಸೂರು ತಾ. |
| ವಾಸ | ಮೈಸೂರು. |

**<u>ಮುಖ್ಯ ವಿಚಾರಣೆಃ ಮಾನ್ಯ  ಸರ್ಕಾರಿ ಅಭಿಯೋಜಕರಿಂದಃ</u>**

1. ದಿಃ 08.03.2021 ರಿಂದ ನಾನು  ಮೈಸೂರು ತಾಲ್ಲೂಕು ಕಚೇರಿಯಲ್ಲಿ ಹೆಚ್ಚುವರಿ ತಾಲ್ಲೂಕು ತಹಶೀಲ್ದಾರ್ ಆಗಿ  ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿಃ 06.08.2022 ರಂದು  ಬೆಳಕವಾಡಿಯ ಪೊಲೀಸ್ ಠಾಣೆಯ ಪಿಎಸ್ಐ ರವರು  ಈ ಪ್ರಕರಣದ ಸಂಬಂಧಿಸಿದಂತೆ ಗಾಯಾಳು ಮಹದೇವಮ್ಮ ರವರ  ಮರಣ ಪೂರ್ವ ಹೇಳಿಕೆಯನ್ನು ಪಡೆದು  ವರದಿ ನೀಡುವಂತೆ ಕೋರಿಕೆ ಪತ್ರವನ್ನು ನೀಡಿದ್ದರು.  ಸಾಕ್ಷಿಯು ಸದರಿ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.46 ಎಂದು ಗುರುತಿಸಲಾಯಿತು.
3. ಅದೇ  ದಿನ , ಸಂಜೆ  4.30 ಗಂಟೆ ಸಮಯದಲ್ಲಿ  ನಾನು  ಸದರಿ ಕೆ ಆರ್ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳು ಮಹದೇವಮ್ಮರವರು ಹೇಳಿಕೆಯನ್ನು ನೀಡುವ ಸ್ತಿತಿಯಲ್ಲಿ ಇದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ದೃಢೀಕರಣ ನೀಡುವಂತೆ ಕೋರಿ ಮನವಿಯನ್ನು ನೀಡಿರುತ್ತೇನೆ.  ಸದರಿ ವೈದ್ಯಾಧಿಕಾರಿಯವರು  ಮಹದೇವಮ್ಮರವರನ್ನು ಪರೀಕ್ಷಿಸಿ, ಸದರಿ ಮಹದೇವಮ್ಮರವರು ಹೇಳಿಕೆಯನ್ನು ನೀಡುವ ಸ್ತಿತಿಯಲ್ಲಿ ಇದ್ದಾರೆ ಎಂದು  ದೃಢೀಕರಣವನ್ನು ನೀಡಿರುತ್ತಾರೆ.  ನಂತರ  ನಾನು ಮತ್ತು ವೈದ್ಯಾಧಿಕಾರಿಯವರು, ಸದರಿ ಮಹದೇವಮ್ಮರವರ ಬಳಿ  ಹೋಗಿರುತ್ತೇವೆ. ನಂತರ ನಾನು ಕೆಲವು  ಪ್ರಶ್ನೆಗಳನ್ನು ಮಹದೇವಮ್ಮರರವರಿಗೆ  ಕೇಳಿ

ಉತ್ತರವನ್ನು ಪಡೆದುಕೊಂಡಿರುತ್ತೇನೆ. ಸದರಿಯವರು ಮರಣ ಪೂರ್ವ ಹೇಳಿಕೆಯನ್ನು ನೀಡಿದ್ದು, ಅದನ್ನು ನಾನು ಬರೆದುಕೊಂಡಿರುತ್ತೇನೆ.

4. ಸದರಿ ಮಹದೇವಮ್ಮರವರು ತಮ್ಮ ಹೇಳಿಕೆಯಲ್ಲಿ , ದಿಃ 03.08.2022 ರಂದು ಸಂಜೆ 7.00 ಗಂಟೆ ಸಮಯದಲ್ಲಿ ನಾನು ಮತ್ತು ಸಿದ್ದರಾಜು ರವರು ಇಬ್ಬರೂ ಮನೆಯ ಹಾಲ್ ನಲ್ಲಿ ಕುಳಿತಿದ್ದಾಗ, ನನ್ನ ಗಂಡ ಸಿದ್ದೇಗೌಡ ರವರು ಮನೆಗೆ ನುಗ್ಗಿ ಅವಾಚ್ಯ ಶಬ್ದಗಳಿಂದ ಬೈದು, ಈ ಮನೆ ಕಟ್ಟಿ ಸಾಕಾಯಿತು, ಈ ಮನೆ ನನ್ನದು, ನೀವಿಬ್ಬರೂ ಮನೆಯಿಂದ ಹೊರಗೆ ಹೋಗಿ ಎಂದು ಬೈಯುತ್ತಾ, ಒಂದು ದೊಣ್ಣೆಗೆ ಬಟ್ಟೆ ಸುತ್ತಿಕೊಂಡು ಬಾಟಲ್ ನಲ್ಲಿ ಸೀಮೆಎಣ್ಣೆಯನ್ನು ತಂದಿದ್ದು ಅಷ್ಟರಲ್ಲಿ ನನ್ನ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಕಡ್ಡಿ ಗೀರಿದ. ನನ್ನ ಮಗ ತಡೆಯಲು ಬಂದಾಗ, ಮಗನ ಮುಖ, ಎಡಗೈ, ಬಲಗೈಗೆ ಸುಟ್ಟಗಾಯವಾಯಿತು. ನನ್ನ ಗಂಡ ಮನೆಯಿಂದ ಹೊರಗೆ ಓಡಿ ಹೋದರು. ನಾನು ಮತ್ತು ನನ್ನ ಮಗ ಕಿರುಚಿಕೊಂಡಾಗ ಅಕ್ಕ ಪಕ್ಕದವರು ಬಂದು ಆಂಬುಲೆನ್ಸ್ ನಲ್ಲಿ ಮಳವಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದರು. ನಂತರ ಕೆ ಆರ್ ಆಸ್ಪತ್ರೆಗೆ ಕಳುಸಿದರು. ನನ್ನ ಗಂಡನ ಮೇಲೆ ಕಾನೂನು ಕ್ರಮ ಜರುಗಿಸಲು ವಿನಂತಿ ಎಂದು ಹೇಳಿಕೆ ನೀಡಿರುತ್ತಾರೆ.

5. ಸದರಿ ಮಹದೇವಮ್ಮ ರವರ ಹೇಳಿಕೆಗೆ ಮಹದೇವಮ್ಮ ರವರ ಎಡ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡಿರುತ್ತೇನೆ. ಸದರಿ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಹೇಳಿಕೆಯನ್ನು ಸಂಜೆ 5.00 ರಿಂದ 5.30 ಗಂಟೆ ತನಕ ಪಡೆದುಕೊಂಡಿರುತ್ತೇನೆ. ನಂತರ ಸದರಿ ಹೇಳಿಕೆಯನ್ನು ವೈದ್ಯಾಧಿಕಾರಿಯವರಿಂದ ದೃಢೀಕರಿಸಿಕೊಂಡಿರುತ್ತೇನೆ. ನಂತರ ಸದರಿ ಹೇಳಿಕೆಯನ್ನು ನನ್ನ ಕವರಿಂಗ್ ಪತ್ರದೊಂದಿಗೆ ಪೊಲೀಸರಿಗೆ ನೀಡಿರುತ್ತೇನೆ. ಸಾಕ್ಷಿಯು ಸದರಿ ಮಹದೇವಮ್ಮ ರವರ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಹೇಳಿಕೆಯನ್ನು ನಿಪಿ.47 ಎಂದು, ಸಾಕ್ಷಿಯ ಸಹಿಯನ್ನು ನಿಪಿ.47(ಎ), 47(ಬಿ) ಮತ್ತು 47(ಸಿ) ಎಂದು ಗುರುತಿಸಲಾಯಿತು. ಸದರಿ ಮಹದೇವಮ್ಮ ರವರ ಎಡ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ.47(ಡಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು ಃ Chief defence counsel ರವರಿಂದ ಃ**

6. ದಿಃ 06.08.2022 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಪೊಲೀಸರು ನನಗೆ ಮನವಿ ಪತ್ರವನ್ನು ನೀಡಿದ್ದರು. ಕೆ.ಆರ್.ಆಸ್ಪತ್ರೆಗೆ ನಾನು ಒಬ್ಬನೇ ಹೋಗಿದೆನು. ಮಹದೇವಮ್ಮ ರವರನ್ನು ನೋಡಿಕೊಳ್ಳಲು ಅವರ ಸಂಬಂಧಿಕರು ಆಸ್ಪತ್ರೆಯಲ್ಲಿ ಯಾರು

ಇರಲಿಲ್ಲ. ನಿಪಿ.47 ರಲ್ಲಿ ಸದರಿ ಮಹದೇವಮ್ಮ ರವರು ಇದ್ದ ವಾರ್ಡಿನ ನಂಬರ್ ಬರೆದಿಲ್ಲ, ಅದರಲ್ಲಿ ಸುಟ್ಟ ಗಾಯಗಳ ವಿಭಾಗ ಎಂದು ಬರೆದಿರುತ್ತೇನೆ. ಸದರಿ ವಾರ್ಡಿನಲ್ಲಿ ಎಷ್ಟು ಬೆಡ್ ಗಳು ಇದ್ದವು ಎಂದು ನನಗೆ ನೆನಪಿಲ್ಲ. ನಿಪಿ.47 ರಲ್ಲಿ ಇರುವ ಕೈ ಬರವಣಿಗೆಯನ್ನು ನಾನೇ ಮಾಡಿರುತ್ತೇನೆ. ನಿಪಿ.47 ರ ಪ್ರಥಮ ಪುಟದಲ್ಲಿರುವ ಕಾಲಂ ನಂಃ 12 ರಿಂದ 14 ರಲ್ಲಿ ಯಾವುದೇ ವಿಚಾರವನ್ನು ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ನಾನು ಮಹದೇವಮ್ಮ ರವರ ಹೇಳಿಕೆಯನ್ನು ಪಡೆಯಲು ಹೋದಾಗ ಪೊಲೀಸರು ಯಾರು ಬಂದಿಲ್ಲ. ಮಹದೇವಮ್ಮ ರವರ ಗುರುತನ್ನು ಯಾರು ಹೇಳಿದರು ಎಂದರೆ ಸಾಕ್ಷಿಯು, ತಾನು ವೈದ್ಯಾಧಿಕಾರಿಯವರನ್ನು ಭೇಟಿಯಾಗಿದ್ದೆನು ಎಂದು ನುಡಿಯುತ್ತಾರೆ. ನಿಪಿ.47 ರಲ್ಲಿ ನಾನು ಸದರಿ ಮಹದೇವಮ್ಮ ರವರ ಹೆಬ್ಬೆಟ್ಟಿನ ಗುರುತನ್ನು attest ಮಾಡಿಲ್ಲ ಎಂದರೆ ಸಾಕ್ಷಿಯು ಸದರಿ ಹೆಬ್ಬೆಟ್ಟಿನ ಗುರುತಿನ ಪಕ್ಕದಲ್ಲಿ ತನ್ನ ಸಹಿ ಇದೆ ಎಂದು ನುಡಿಯುತ್ತಾರೆ. ಮಹದೇವಮ್ಮ ರವರು ನಿಪಿ.47 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಹಾಗೂ ನಾನು ಶಾಮೀಲಾಗಿ ಪ್ರಕರಣಕ್ಕೆ ಅನಕೂಲವಾಗುವಂತೆ ನಿಪಿ.47 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

7. ನಾನು ಹೇಳಿಕೆಯನ್ನು ಪಡೆದ ದಿನವೇ ಸದರಿ ಹೇಳಿಕೆಯನ್ನು ಪೊಲೀಸರಿಗೆ ನೀಡಿದ್ದೇನೆ. ಪೊಲೀಸರು ಬಂದು ಸದರಿ ಹೇಳಿಕೆಯನ್ನು ನನ್ನಿಂದ ಪಡೆದು, ಸ್ವೀಕೃತಿಯನ್ನು ನೀಡಿರುತ್ತಾರೆ. ಪೊಲೀಸರಿಗೆ ಪತ್ರವನ್ನು ಹಾಗೂ ಹೇಳಿಕೆಯನ್ನು ನೀಡಿದ್ದೇನೆ, ಪ್ರತ್ಯೇಕ ಜ್ಞಾಪನವನ್ನು ನೀಡಿಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.